# ಮರಚುಂಗುಳ



ಮಲೆನಾಡಿನ ದಟ್ಟ ಕಾಡುಗಳಲ್ಲಿ ವಿವಿಧ ಜಂತುಗಳ ಪ್ರಬೇಧಗಳಿಗೇನೂ ಕೊರತೆಯಿಲ್ಲ. ಮಳೆಗಾಲ ಶುರುವಾಯಿತೆಂದರೆ ಸಾಕು, ಎಲ್ಲೆಲ್ಲೂ ಅನೇಕ ವಿಷ ಜಂತುಗಳು, ಕೀಟಗಳು ಜನ್ಮತಾಳುತ್ತವೆ. ಬರೀ ಕಾಲಿನಲ್ಲಿ ಓಡಾಡುವವರು ಎಷ್ಟು ಎಚ್ಚರಿಕೆಯಿಂದಿದ್ದರೂ ಕಡಿಮೆಯೇ.

ಮಳೆಗಾಲದಲ್ಲಿ ಮರಗಳಲ್ಲಿ ಕಾಣಸಿಗುವ ಈ ಮರಚುಂಗುಳ ಕಂಬಳಿ ಹುಳದಂತೆಯೇ ರೋಮವನ್ನು ಹೊಂದಿರುತ್ತದೆ. ಅದರ ಬಣ್ಣ ಸ್ವಲ್ಪ ನೀಲಿ ಮಿಶ್ರಿತ ನೇರಳೆ. ಬಹಳ ವಿಷಕಾರಿ. ಅದು ಕಚ್ಚುವುದಿರಲಿ, ಅದನ್ನು ಮುಟ್ಟಿದರೂ ಸಾಕು ಸರಿಯಾದ ಔಷಧದ ಆರೈಕೆ ಸಿಗದಿದ್ದರೆ ಆ ಭಾಗ ಕೊಳೆಯುತ್ತಾ ಹೋಗುತ್ತದಂತೆ. ಸತ್ತ ಹುಳವನ್ನು ತುಳಿಯುವುದೂ ಅಷ್ಟೇ ಅಪಾಯಕಾರಿ.

**-ಪುಷ್ಪಾ ಎನ್.ಕೆ. ರಾವ್, ಉಡುಪಿ**



# ಮೂಗಿಗಿಂತ ಮೂಗುತಿಯೇ ಭಾರ!

ಈ ವಾಕ್ಯಕ್ಕೆ ಅನ್ವರ್ಥಕವಾಗಿರುವ ದೃಶ್ಯ ಕಂಡು ಬಂದದ್ದು ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಗ್ರಾಮಾಂತರ ಪ್ರದೇಶದಲ್ಲಿ. ಇತ್ತೀಚೆಗೆ ರಸ್ತೆಯಲ್ಲಿ ಸಾಗುತ್ತಿದ್ದಾಗ ಈ ದೃಶ್ಯ ಕಣ್ಣಿಗೆ ಬಿತ್ತು. ಇಂತಹ ಸಣ್ಣ, ದೊಡ್ಡ ಆಟೋಗಳು ತೆಂಗಿನಮಟ್ಟೆಗಳನ್ನು ಹೇರಿಕೊಂಡು ತುಮಕೂರು, ತಿಪಟೂರು, ಹಾಸನ, ಚನ್ನರಾಯನಪಟ್ಟಣದ ಕಡೆಗೆ ಹಾದು ಹೋಗುತ್ತಿದ್ದವು. ಅಂದಾಜಿನಂತೆ 1000–5000ದವರೆಗೂ ತೆಂಗಿನಮಟ್ಟೆಗಳನ್ನು ಹೇರುವ ಇವರು ಗಮ್ಯ ಸ್ಥಾನ ತಲುಪುವವರೆಗೂ ಉದುರದಂತೆ ನೋಡಿಕೊಳ್ಳುತ್ತಾರೆ.

**-ಡಾ. ಕೆ.ವಿ. ಸಂತೋಷ್, ಹೊಳಲ್ಕೆರೆ**

# ಸೃಷ್ಟಿ ವೈಚಿತ್ರ್ಯ!

ಸಾಮಾನ್ಯವಾಗಿ ಪಪ್ಪಾಯಿ ಗಿಡದಲ್ಲಿ ಕಾಯಿಗಳು ಕಾಂಡಕ್ಕೆ ಅಂಟಿಕೊಂಡು ಬೆಳೆಯುತ್ತವೆ. ಆದರೆ ಈ ಪಪ್ಪಾಯಿ ಗಿಡದಲ್ಲಿ ಕಾಯಿಗಳು ಬಳ್ಳಿಯ ತುದಿಯಲ್ಲಿ ಬಿಟ್ಟಂತೆ ಕಾಣುತ್ತವೆ. ಕೆಂಗೇರಿ ವ್ಯಾಪ್ತಿಯ ಚಳ್ಳಘಟ್ಟದ ಅಶ್ವಥ್‌ಚಾರ್ ಅವರ ಮನೆಯ ಆವರಣದಲ್ಲಿ ನೆಲಕ್ಕೆ ಬಾಗಿರುವಂತಹ ಪಪ್ಪಾಯಿ ಕಾಯಿಗಳನ್ನು ನೋಡಬಹುದು!!

**- ಹೆಚ್.ಎಸ್. ಲಿಂಗಮಹೇಶ್ವರ, ಬೆಂಗಳೂರು**

ಚಿತ್ರ: ಡಾ. ಯತೀಶ್‌ಕುಮಾರ್, ಬೆಂಗಳೂರು

